# ಕರ್ನಾಟಕ ವಿಧಾನ ಪರಿಷತ್

## 150ನೇ ಅಧಿವೇಶನ-2023

| ನಿಯಮ-72ರಡಿಯ ಗಮನ ಸೆಳೆಯುವ ಸೂಚನೆ | |
|---|---|
| ಸೂಚನೆ ನೀಡಿದ ಸದಸ್ಯರ ಹೆಸರು | ಶ್ರೀ ಮಧು ಜಿ. ಮಾದೇಗೌಡ<br>(ದಕ್ಷಿಣ ಪದವೀಧರ ಕ್ಷೇತ್ರ),<br>ವಿಧಾನ ಪರಿಷತ್ತಿನ ಮಾನ್ಯ ಸದಸ್ಯರು |

## ವಿಷಯ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಅಧ್ಯಕ್ಷರ ನಾಮ ನಿರ್ದೇಶನ ಹಾಗೂ ಅವರ ಕಾರ್ಯಾವಧಿಗೆ ಸಂಬಂಧಿಸಿದಂತೆ ಜಲ(ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1974ರ ಕಲಂಗಳನ್ನು ಮೀರಿ ನೇಮಕಮಾಡಿರುವ ಬಗ್ಗೆ.

## ಸೂಚನೆಯ ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ ಹೇಳಿಕೆ

ರಾಜ್ಯಗಳ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರ ನೇಮಕಾತಿಗೆ ಅಗತ್ಯವಾಗುವ ಅರ್ಹತೆಯ ಬಗ್ಗೆ, ಜಲ(ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1974ರ ಪ್ರಕರಣ 4ರ ಉಪ ಪ್ರಕರಣ(2)(a)ರಲ್ಲಿ, ಈ ಕೆಳಕಂಡಂತೆ ಉಪಬಂಧಿಸಲಾಗಿದೆ.

"(2) A State Board shall consist of the following members, namely:—
(a) a chairman, being a person having special knowledge or practical experience in respect of matters relating to environmental protection or a person having knowledge and experience in administering institutions dealing with the matters aforesaid, to be nominated by the State Government

Provided that the chairman may be either whole-time or part-time as the State Government may think fit"

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲು ಸಂಖ್ಯೆ:1359/2017ರ ಪ್ರಕರಣದಲ್ಲಿ, ಎಲ್ಲಾ ರಾಜ್ಯಗಳಿಗೆ ದಿನಾಂಕ:22.09.2017ರಂದು ಆದೇಶಿಸಿದಂತೆ, ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರ, ಸದಸ್ಯರುಗಳ ನಾಮನಿರ್ದೇಶನ ಹಾಗೂ ಅವರ ಸೇವಾ ಷರತ್ತು ಮತ್ತು ನಿಬಂಧನೆಗಳು ಹಾಗೂ ಸದಸ್ಯ ಕಾರ್ಯದರ್ಶಿಯ ನೇಮಕಾತಿ ಕುರಿತಂತೆ ಸರ್ಕಾರದ ಆದೇಶ ಸಂಖ್ಯೆ:ಎಫ್‌ಇಇ 230 ಇಪಿಸಿ 2017, ದಿನಾಂಕ:19.06.2020ರಲ್ಲಿ ಸಮಗ್ರ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ. ಈ ಆದೇಶದ ಅನುಬಂಧದಲ್ಲಿರುವ ಮಾರ್ಗಸೂಚಿಗಳ ಪೈಕಿ ಕ್ರಮಸಂಖ್ಯೆ:2 ಮತ್ತು 3ರಲ್ಲಿ ಮಂಡಳಿಯ ಅಧ್ಯಕ್ಷರ ನೇಮಕಾತಿಗೆ ಅಗತ್ಯವಾಗುವ ಅರ್ಹತೆ ಹಾಗೂ ಪದಾವಧಿಯ ಕುರಿತು ಕೆಳಕಂಡತೆ ಗೊತ್ತುಪಡಿಸಲಾಗಿದೆ.

2. The State Government shall nominate a person having special knowledge or practical experience in respect of matters relating to environmental protection or a person having knowledge and experience in an institution dealing with the matters aforesaid, as Chairman of the State Board in accordance with the provisions of sub section 2 of section 4 of the Water (Prevention and Control of Pollution) Act, 1974, on full time basis, for a period of three years from the date of nomination.

3. No person shall be eligible for being considered for nomination as the Chairman unless he/she:

possesses a Master's degree in Environment Science or a Master's Degree in Environment Engineering or an equivalent degree or allied sciences from a recognized University or institute and has knowledge and experience in areas related to environmental protection or has been a part of administration in a Government Department or Organization or University or Institute dealing with environmental issues (including issues of air and water pollution, waste management, natural resources management and environmental impact assessment)

ಸರ್ಕಾರದ ಆದೇಶ ಸಂಖ್ಯೆ:ಎಫ್‌ಇಇ 230 ಇಪಿಸಿ 2017, ದಿನಾಂಕ:19.06.2020ರಂತೆ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ, ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಹಾಗೂ ಪರಿಸರ ಸಚಿವರ ಉಪಾಧ್ಯಕ್ಷರಾಗಿರುವ ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿ ಇವರು ಸಂಯೋಜಕರು ಮತ್ತು ಕಾರ್ಯದರ್ಶಿಯಾಗಿರುವ ಶೋಧನಾ ಮತ್ತು ಆಯ್ಕೆ ಸಮಿತಿಯು, ಸ್ವೀಕೃತವಾದ ಅರ್ಜಿಗಳನ್ನು ಮಾರ್ಗಸೂಚಿಗಳನ್ವಯ ಪರಿಶೀಲಿಸಿ ಡಾ.ಶಾಂತ್ ಅವ್ವೇರಹಳ್ಳಿ ತಿಮ್ಮಯ್ಯ, B.Tech(Mining Engg.), M.Tech(Industrial Pollution Control), Ph.D(Socio-economic and Environmental Impact Studies ಇವರನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿರುತ್ತದೆ.

Behandre

**(ಈಶ್ವರ್ ಬಿ. ಖಂಡ್ರೆ)**
**ಅರಣ್ಯ, ಜೀವಿಪರಿಸ್ಥಿತಿ ಹಾಗೂ ಪರಿಸರ ಸಚಿವರು**

**<u>ಎಫ್‌ಇಇ/ 161 /ಇಪಿಸಿ/2023</u>**